ಅಧ್ಯಕ್ಷರು: ನೀವು ಮಾಡುತ್ತಿರಾ? ಹೇ ತಾಳಿರಿ. ಅವರೇ ವಹಿಸಿಕೊಳ್ಳೊತ್ತಾರೇನೋ ಕೇಳಿ ಕೊಟ್ಟು ಬಿಡಿ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್: ನಾವೇಕೆ ವಹಿಸಿಕೊಳ್ಳೋಣ ಅಧ್ಯಕ್ಷರೆ?

ಅಧ್ಯಕ್ಷರು: ಮತ್ತೆ ಬಿಡಿ ಟೆಂಡರ್ ಕರೆಯಲಿ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಶಾಸಕರು ಹೇಳುವುದು ಸತ್ಯವಿದೆ. ಅವನು 28.09.13 ರಂದು Work order ಕೊಟ್ಟರೂ ಕೂಡಾ ಕೆಲಸ ನಿಧಾನವಾಗಿ ಮಾಡುತ್ತಿದ್ದಾನೆ. ಅವನಿಗೆ warn ಮಾಡಿದ್ದೇವೆ. ಒಂದು ವೇಳೆ satisfactory ಎನಿಸದಿದ್ದರೆ resaind ಮಾಡಿ ಟೆಂಡರ್ ಕರೆಯುತ್ತೇವೆ. ಸನ್ಮಾನ್ಯ ಸದಸ್ಯರ ಜೊತೆ ಚರ್ಚಿಸಲು ಹೇಳಿದ್ದೇನೆ. ಅವರ ಜೊತೆ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು. ಈಗ ವಡ್ನಾಳ್ ರಾಜಣ್ಣರವರ ಪ್ರಶ್ನೆ.

ಏತ ನೀರಾವರಿ ಮೂಲಕ ಕೆರೆ ತುಂಬಿಸುವುದು

162(1753); ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ)

ಅ) ಉಬ್ರಾಣಿ ಮತ್ತು ಅಮೃತಾಪುರ ಏತ ನೀರಾವರಿ ಪ್ರದೇಶದಲ್ಲಿ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ;

ಆ) ಹಾಗಿದ್ದಲ್ಲಿ, ಉಳಿದಿರುವ ಕೆರೆಗಳಿಗೆ ನೀರು ತುಂಬಿಸಲು ಕಾರ್ಯಕ್ರಮ ಗಳನ್ನೇನಾದರೂ ಸರ್ಕಾರ ಹಮ್ಮಿಕೊಂಡಿದೆಯೇ?

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ಉಬ್ರಾಣಿ ಅಮ್ಮತಪುರ ಏತ ನೀರಾವರಿ ಯೋಜನೆ ಅಡಿ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ 89 ಕೆರೆಗಳಿಗೆ 4 ಸೀರೀಸ್ ಮೂಲಕ, ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ 57 ಕೆರೆಗಳಿಗೆ 3 ಸೀರೀಸ್ ಮೂಲಕ ನೀರನ್ನು ಒದಗಿಸಲು ಯೋಜಿಸಲಾಗಿದ್ದು, ಯೋಜನೆ

ಪೂರ್ಣಗೊಂಡು ನಿರ್ವಹಣೆ ಹಂತದಲ್ಲಿರುತ್ತದೆ. ಸದರಿ ಯೋಜನೆಯಿಂದ ಚನ್ನಗಿರಿ ತಾಲ್ಲೂಕಿನ 89 ಕೆರೆಗಳ ಪೈಕಿ 28 ಕೆರೆಗಳಿಗೆ ಹಾಗೂ ತರೀಕೆರೆ ತಾಲ್ಲೂಕಿನ 57 ಕೆರೆಗಳ ಪೈಕಿ 37 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ.

ಆ) ಈಗಿರುವ ಉಬ್ರಾಣಿ ಮತ್ತು ಅಮೃತಾಪುರ ಏತ ನೀರಾವರಿ ಯೋಜನೆಯ Gravity Main Pipeline ವಿಸ್ತರಿಸಿ ಬಾಕಿ ಉಳಿದ ಕೆರೆಗಳ ಪೈಕಿ 24 ಕೆರೆಗಳಿಗೆ ನೀರು ತುಂಬಿಸುವ ಕುರಿತಂತೆ ಉಬ್ರಾಣಿ–ಅಮೃತಾಪುರ ಏತ ನೀರಾವರಿ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಲು ಸರ್ಕಾರವು ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಉಳಿದ 57 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ ಪರಿಶೀಲನೆಯಲ್ಲಿದೆ.

ಶ್ರೀ ವಡ್ನಾಳ್ ರಾಜಣ್ಣ: ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಉಬ್ರಾಣಿ ಮತ್ತು ಅಮೃತಾಪುರ ಏತ ನೀರಾವರಿ ಪ್ರದೇಶದಲ್ಲಿ ಬರುವ ಎಷ್ಟು ಕೆರೆಗಳಿಗೆ ನೀರನ್ನು ತುಂಬಿಸಿದ್ದಿರಿ ಎಂಬುದಕ್ಕೆ ಉತ್ತರವನ್ನು ಸಮಂಜಸವಾಗಿ ಒದಗಿಸಿದ್ದಾರೆ. ಆದರೆ, 89 ಕೆರೆಗಳ ಪೈಕಿ 28 ಕೆರೆಗಳಿಗೆ ಮಾತ್ರ ಮತ್ತು 57 ಕೆರೆಗಳ ಪೈಕಿ 37 ಕೆರೆಗಳಿಗೆ ಮಾತ್ರ ನೀರನ್ನು ಒದಗಿಸಿದ್ದಾರೆ. ಇನ್ನೊಂದು ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಉಳಿದಿರುವ ಕೆರೆಗಳಿಗೆ ನೀರನ್ನು ತುಂಬಿಸಲು ಕಾರ್ಯಕ್ರಮಗಳೇನಾದರೂ ಸರ್ಕಾರ ಹಮ್ಮಿಕೊಂಡಿದೆಯೆ ಎಂದು, ಅದಕ್ಕೆ ಈಗಾಗಲೇ ಸುಮಾರು 4–5 ಕೆರೆಗಳಿಗೆ ಪೈಪ್ ಲೈನ್ ಮೂಲಕ ನೀರನ್ನು ಒದಗಿಸಲು ಟೆಂಡರನ್ನು ಕರೆದಿದ್ದಾರೆ. ಇನ್ನುಳಿದ ಕೆರೆಗಳಿಗೆ ಈಗಾಗಲೇ ಸರ್ವೆ ಆಗಿರುವ ಕೆಲಸವೇನಿದೆ, ಅದನ್ನು ಆದಷ್ಟು ಬೇಗ ಮಾಡಿ ಅದಕ್ಕೂ ಸಹ ಟೆಂಡರ್ ಕರೆಯಬೇಕೆಂಬ ಒತ್ತಾಯವನ್ನು ತಮ್ಮ ಮೂಲಕ ಮಾಡುತ್ತೇನೆ.

ಶ್ರೀ ಎಂ. ಬಿ.ಪಾಟೀಲ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಅವರೊಡನೆ ಚರ್ಚಿಸಿ, ತಾಂತ್ರಿಕ ಸಾಧ್ಯತೆಗಳೇನಿವೆ, ಮತ್ತು ಉಳಿದದ್ದು ಏನಿವೆ, ಅದನ್ನು ಸರ್ವೆ ಮಾಡಿಸಿ ಮುಂದಿನ ಕ್ರಮಕೈಗೊಳ್ಳುತ್ತೇವೆ.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ಚನ್ನಗಿರಿ ತಾಲ್ಲೂಕಿನ ಅರ್ಧ ಭಾಗ ನನ್ನ ಕ್ಷೇತ್ರಕ್ಕೆ ಬರುತ್ತದೆ. ವ್ಯವಸ್ಥಿತವಾಗಿ ನೀರಾವರಿ ಸಚಿವರು ನಮ್ಮ ಕೆರೆಗಳನ್ನೇ ಬಿಟ್ಟಿದ್ದಾರೆ. ದಯವಿಟ್ಟು ನಮ್ಮ ಕೆರೆಗಳನ್ನು ತುಂಬಿಸಬೇಕು. ಅಲ್ಲ ಚನ್ನಗಿರಿ, ನಮ್ಮ ಮಾಯಕೊಂಡ ಕ್ಷೇತ್ರಕ್ಕೆ ಸಂಬಂಧಪಡುವಂತಹ ವಿಚಾರ.

ಅಧ್ಯಕ್ಷರು: ಪ್ರಶ್ನೆ ಕೇಳಿ.

ಶ್ರೀ ಕೆ. ಶಿವಮೂರ್ತಿ: ಚನ್ನಗಿರಿ ತಾಲ್ಲೂಕಿನ ಹಳ್ಳಿಗಳನ್ನು ಬಿಟ್ಟಿದ್ದಾರೆ. ನೀರಾವರಿ ಯೋಜನೆಯಿಂದ ವಂಚಿತವಾಗಿದ್ದು, ದಯಮಾಡಿ ಅವುಗಳನ್ನು ಸೇರಿಕೊಳ್ಳಬೇಕೆಂದು ಕೇಳಿತ್ತೇನೆ.

ಅಧ್ಯಕ್ಷರು: ಬರುತ್ತವೇನು ಎಂದು ನೋಡಿ, ಬಂದರೆ ಸೇರಿಸಿ.

ಶ್ರೀ ಎಂ.ಬಿ.ಪಾಟೀಲ: ಮಾನ್ಯ ಅಧ್ಯಕ್ಷರೆ, ಪರೀಶೀಲನೆ ಮಾಡಿ, ಸಾಧ್ಯತೆ ಇದ್ದರೆ ಅದನ್ನು ಕೂಡಾ ಸೇರಿಸಿಕೊಳ್ಳತ್ತೇವೆ.Water availability ನೋಡಬೇಕು.

ಶ್ರೀ ಕೆ. ಶಿವಮೂರ್ತಿ: ನೀವು ತಾರತಮ್ಯ ಮಾಡಬೇಡಿ.

ಶ್ರೀ ಎಂ.ಬಿ.ಪಾಟೀಲ: ಮಾನ್ಯ ಅಧ್ಯಕ್ಷರೆ, ತಾರತಮ್ಯ ಮಾಡುವ ಪ್ರಶ್ನೆ ಬರುವುದಿಲ್ಲ. ಇವತ್ತಿನ ದಿನ ಸಾಧ್ಯಾಸಾಧ್ಯತೆಗಳನ್ನು ನೋಡಿ, Water availability ಇದ್ದರೆ ಮಾಡುವುದು.

ಅಧ್ಯಕ್ಷರು: ನಿಮ್ಮ project ನಲ್ಲಿದ್ದರೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಪರಿಶೀಲನೆ ಮಾಡಿ, ಇಷ್ಟೇ.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ಒಂದೇ ತಾಲ್ಲೂಕು.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ವಡ್ನಾಳ್ ರಾಜಣ್ಣ: ಮಾನ್ಯ ಅಧ್ಯಕ್ಷರೆ, ಆ ಯೋಜನೆಯಲ್ಲಿ ಇದು ಬರುವುದಿಲ್ಲ. ಶಿವಮೂರ್ತಿಯವರು ಕೇಳುವುದರಲ್ಲಿ ಬರುವುದಿಲ್ಲ. ಕಸಬಾ ಹೋಬಳಿಯಲ್ಲಿಯದರಲ್ಲಿ ಬರುತ್ತದೆ.

ಅಧ್ಯಕ್ಷರು: ಅಯಿತು ಬಿಡಿ. ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಈಗ ಬಿ.ಸುರೇಶಗೌಡರವರ ಪ್ರಶ್ನೆ.

ಸಾಮಾಜಿಕ ಅರಣ್ಯ ಯೋಜನೆ

165(1939); ಶ್ರೀ ಸುರೇಶಗೌಡ.ಬಿ.(ತುಮಕೂರು ಗ್ರಾಮಾಂತರ)

ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹಸರೀಕರಣಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಇದಕ್ಕಾಗಿ ನಿಗದಿಗೊಳಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿ ಎಷ್ಟು;

ಇ) ಈವರೆಗೆ ಜಿಲ್ಲಾ ವ್ಯಾಪ್ತಿಯಲ್ಲಿ ಸಾಧಿಸಿರುವ ಗುರಿ ಎಷ್ಟು (ತಾಲ್ಲೂಕು ವಾರು ವಿವರ ನೀಡುವುದು)?

ಶ್ರೀ ಬಿ.ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹೆಸರೀಕರಣಕ್ಕಾಗಿ ನಿಗದಿಪಡಿಸಿದ ಅನುದಾನದ ವಿವರಗಳನ್ನು ಅನುಬಂಧ–1 ನೀಡಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011–12ರಿಂದ 2013–14ನೇ ಸಾಲಿನವರೆಗೆ ತಾಲ್ಲೂಕುವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ–2 ನೀಡಲಾಗಿದೆ.

ಇ) ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011–12ರಿಂದ 2013–14ನೇ ಸಾಲಿನವರೆಗೆ ತಾಲ್ಲೂಕುವಾರು ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಸಾಧನೆಯನ್ನು ಅನುಬಂಧ–3ರಲ್ಲಿ ನೀಡಲಾಗಿದೆ.